**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ.ಟಿ.ಶ್ರೀಕಂಠೇಗೌಡ ರವರು ನಿಯಮ 72 ರಡಿಯಲ್ಲಿ ನೀಡಿರುವ ಗಮನ ಸೆಳೆಯುವ ಸೂಚನೆ ಸಂಖ್ಯೆ:182 ಕ್ಕೆ ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಹೇಳಿಕೆ**

**ವಿಷಯ:** ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕು ಸೋಂಪುರ ಹೋಬಳಿಯಲ್ಲಿ ಬಹಳಷ್ಟು ರೈತರು ವ್ಯವಸಾಯದ ಉದ್ದೇಶದಿಂದ ಕೊಳವೆ ಬಾವಿಗಳನ್ನು ಕೊರೆಸಿ, ಪಂಪ್ ಸೆಟ್‌ಗಳನ್ನು ಅಳವಡಿಸಿದ್ದರೂ, ಅಂತಹ ರೈತರುಗಳಿಗೆ ಟಿ.ಸಿ.ಗಳನ್ನು ಅಳವಡಿಸದೇ ಹಾಗೂ ವಿದ್ಯುದೀಕರಣ ಮಾಡಿಕೊಡದೇ ವಿಳಂಬ ಮಾಡುತ್ತಿರುವ ಬಗ್ಗೆ.

*****

ರೈತರ ನೀರಾವರಿ ಪಂಪ್‌ಸೆಟ್‌ಗಳಿಗೆ ಮೂಲಭೂತ ಸೌಕರ್ಯವನ್ನು ಒದಗಿಸಿ ವಿದ್ಯುತ್ ಸಂಪರ್ಕ ಪಡೆಯಲು ಸರ್ಕಾರದ ಸುತ್ತೋಲೆ ಸಂಖ್ಯೆ: ಇಎನ್ 41 ವಿಎಸ್‌ಸಿ 2014/ಪಿ1 ದಿನಾಂಕ:14.07.2014 ರಂತೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕು ಸೋಂಪುರ ಹೋಬಳಿಯಲ್ಲಿ 446 ಸಂಖ್ಯೆಯ ಅರ್ಜಿಗಳನ್ನು ರೈತರು ನೊಂದಣಿ ಮಾಡಿದ್ದು, 394 ಸಂಖ್ಯೆಯ ರೈತರು ರೂ.10,000/- ಮತ್ತು ಇತರೆ ಅವಶ್ಯಕ ಶುಲ್ಕಗಳನ್ನು ಪಾವತಿಸಿದ್ದಾರೆ. ಅವುಗಳಲ್ಲಿ 288 ಸಂಖ್ಯೆಯ ರೈತರುಗಳ ಪಂಪ್ ಸೆಟ್‌ಗಳಿಗೆ 184 ಸಂಖ್ಯೆಯ ಪರಿವರ್ತಕಗಳನ್ನು ಅಳವಡಿಸಿ ಮೂಲಭೂತ ಸೌಕರ್ಯವನ್ನು ಒದಗಿಸಿ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲಾಗಿರುತ್ತದೆ.

ಬಾಕಿ ಇರುವ 106 ಸಂಖ್ಯೆಯ ರೈತರುಗಳ ಪಂಪ್‌ಸೆಟ್‌ಗಳಿಗೆ ಮೂಲಭೂತ ಸೌಕರ್ಯವನ್ನು ಕಲ್ಪಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ:

- ಆಕ್ಷನ್ ಪ್ಲಾನ್ (ಕಾರ್ಯ ತಂತ್ರ) ಯೋಜನೆಯಡಿ ಅನಧಿಕೃತ/ಹೊಸ ನೀರಾವರಿ ಪಂಪ್ ಸೆಟ್‌ಗಳಿಗೆ ಮೂಲಭೂತಸೌಕರ್ಯವನ್ನು ಕಲ್ಪಿಸುವ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ.
- ಆಕ್ಷನ್ ಪ್ಲಾನ್ (ಕಾರ್ಯ ತಂತ್ರ) ಯೋಜನೆಯ ಕಾಮಗಾರಿಯೊಂದಿಗೆ, ಅನಧಿಕೃತ/ಹೊಸ ನೀರಾವರಿ ಪಂಪ್ ಸೆಟ್‌ಗಳಿಗೆ ಮೂಲಭೂತ ಸೌಕರ್ಯವನ್ನು ಒದಗಿಸುವ ಕಾಮಗಾರಿಗಳಿಗೆ ಟೆಂಡರ್ ಕರೆಯಲು ದಿನಾಂಕ 09.09.2021 ರಂದು ನಡೆದ ಬೆಂಗಳೂರು ವಿದ್ಯುತ್ ಕಂಪನಿ ಮಂಡಳಿಯ ಸಭೆಯಲ್ಲಿ ಅನುಮೋದನೆಗೊಂಡಿದ್ದು, ವಿಸ್ತ್ರುತ ಯೋಜನಾ ವರದಿಯು (DPR) ತಯಾರಿಕೆಯ ಹಂತದಲ್ಲಿರುತ್ತದೆ.

ಸಂಖ್ಯೆ: ಎನರ್ಜಿ 85 ಇಬಿಎಸ್ 2022

(ವಿ ಸುನಿಲ್ ಕುಮಾರ್)
ಇಂಧನ ಹಾಗೂ ಕನ್ನಡ ಮತ್ತು
ಸಂಸ್ಕೃತಿ ಸಚಿವರು.